ವಿಧಾನ ಸೌಧ ಸಿಬ್ಬಂದಿಯ ನಿಯಂತ್ರಣಕ್ಕೆ ಸ್ಮಾರ್ಟ್ ಕಾರ್ಡ್ ಬಳಕೆ:

13 (368) ಶ್ರೀ ರಾಮದಾಸ. ಎ (ಕೃಷ್ಣರಾಜ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ವಿಧಾನ ಸೌಧದ ಸಿಬ್ಬಂದಿಯ ನಿಯಂತ್ರಣಕ್ಕೆ ಸ್ಮಾರ್ಟ್ ಕಾರ್ಡ್ ಬಳಕೆಗೆ ತಂದಿರುವ ಉದ್ದೇಶವೇನು;

2) ಇದರಿಂದ ಸಿಬ್ಬಂದಿಯವರ ಮನೋ ಪ್ರವೃತ್ತಿಯಲ್ಲಿ ಬದಲಾವಣೆಗಳೇನಾದರೂ ಆಗಿದೆಯೇ; ನೌಕರರು ಎಷ್ಟರ ಮಟ್ಟಿಗೆ ಶಿಸ್ತಿಗೆ ಒಳಪಟ್ಟಿರುತ್ತಾರೆ;

3) ಈ ಪದ್ಧತಿ ಜಾರಿಗೆ ಬಂದ ನಂತರ ಶಿಸ್ತು ಭಂಗ ಪ್ರಕರಣಗಳು ವರದಿಯಾಗಿರುವುದು ಎಷ್ಟು; ಮತ್ತು ಇದರ ಮೇಲೆ ಏನು ಕ್ರಮವನ್ನು ಕೈಗೊಳ್ಳಲಾಗಿದೆ;

4) ಈ ಉದ್ದೇಶ ಜಾರಿಗೆ ತರಲು ಆಗಿರುವ ವೆಚ್ಚ ಎಷ್ಟು;

5) ಇದೇ ರೀತಿಯ ಪದ್ಧತಿಯನ್ನು ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಜಾರಿಗೆ ತರುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

1) ಸಚಿವಾಲಯದ ಎಲ್ಲಾ ಸಿಬ್ಬಂದಿಗಳ ಹಾಜರಾತಿಯನ್ನು ನಿಯಂತ್ರಣಗೊಳಿಸುವ ಹಾಗೂ ಸಮಯ ನಿಷ್ಠೆಯನ್ನು ಉತ್ತಮಗೊಳಿಸುವ ಸಲುವಾಗಿ ಸ್ಮಾರ್ಟ್ ಕಾರ್ಡ್ ಪದ್ಧತಿಯನ್ನು ಜಾರಿಗೆ ತರಲಾಗಿದೆ.

2) ಸ್ಮಾರ್ಟ್ ಕಾರ್ಡ್ ಪದ್ಧತಿ ಜಾರಿಗೆ ಬಂದ ನಂತರ ಸಚಿವಾಲಯದ ಸಿಬ್ಬಂದಿಯ ಮನೋಪ್ರವೃತ್ತಿಯಲ್ಲಿ ಸಾಕಷ್ಟು ಪ್ರಗತಿ ಕಂಡು ಬಂದಿದೆ. ಈ ಪದ್ಧತಿಯಲ್ಲಿ ಹಾಜರಾತಿಯನ್ನು ಬದಲಾಯಿಸುವಂತಿಲ್ಲ. ಅಲ್ಲದೆ ಕಛೇರಿಗೆ ಬಂದ ವೇಳೆ ಹಾಗೂ ಕಛೇರಿ ಬಿಡುವ ವೇಳೆಯು ದಾಖಲಾಗುತ್ತದೆ. ಈ ಪದ್ಧತಿಯಲ್ಲಿ ತಡವಾಗಿ ಕಛೇರಿಗೆ ಬರುವ ಹಾಗೂ ನಿಗದಿತ ವೇಳೆಗಿಂತ ಮೊದಲೇ ಕಛೇರಿಯನ್ನು ಬಿಡುವ ನೌಕರರನ್ನು ಗುರುತಿಸಬಹುದು. ಆದುದರಿಂದ ಸಿಬ್ಬಂದಿಯ ಹಾಜರಾತಿಯಲ್ಲಿ ಗಣನೀಯ ಪ್ರಗತಿ ಮತ್ತು ಹೆಚ್ಚಿನ ಶಿಸ್ತು ಕಂಡು ಬಂದಿದೆ.

3) ಸ್ಮಾರ್ಟ್ ಕಾರ್ಡ್ ಪದ್ಧತಿ ಜಾರಿಗೆ ಬಂದ ನಂತರ 622 ಶಿಸ್ತು ಬಂಧ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಈ ಸಿಬ್ಬಂದಿಯ ವಿರುದ್ಧ ಕ್ರಮ ಜರುಗಿಸುವಂತೆ ಸಂಬಂಧಪಟ್ಟ ಇಲಾಖಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳಿಗೆ ಸೂಚನೆ ನೀಡಲಾಗಿದೆ.

4) 16,39,665-00 ರೂಪಾಯಿಗಳು.

5) ಇದೆ.

ಶ್ರೀ ಎ. ರಾಮದಾಸ್: ರಾಜ್ಯದಲ್ಲಿ ಸ್ಮಾರ್ಟ್ ಕಾರ್ಡ್ ಜಾರಿಗೆ ಬಂದು ಒಂದು ವರ್ಷವಾಗುತ್ತಿದೆ. ಆದಾಗ್ಯೂ ಅದು ಸಂಪೂರ್ಣವಾಗಿ ಜಾರಿಗೆ ಬಂದಿಲ್ಲವೆಂದು, ಫೆಬ್ರವರಿ 5ನೇ ತಾರೀಖು ಒಂದು ಜಿ.ಓ. ಹೊರಡಿಸಿ, ಇದನ್ನು ಕಡ್ಡಾಯವಾಗಿ ಮಾಡುವಂಥ ವ್ಯವಸ್ಥೆ

ಕೊಟ್ಟಿತ್ತೇ? ಹಾಗೆಯೇ, 25ನೇ ತಾರೀಖು ತಮ್ಮ ಅಧಿಕಾರಿಗಳು ಎಲ್ಲಾ ಅಧಿಕಾರಿಗಳಿಗೂ ಈ-ಮೇಲ್ ಮೂಲಕ ಕಳುಹಿಸಿ, ಕಡ್ಡಾಯವಾಗಿ ಜಾರಿಗೆ ತರಬೇಕೆಂಬ ವಿಚಾರವನ್ನು ಕೊಟ್ಟಿದ್ದಾರೆಯೇ? ಎಷ್ಟು ಇಲಾಖೆಗಳಲ್ಲಿ ಇಂದು ಸಹ ಹಳೆಯ ಹಾಜರಿ ಪದ್ಧತಿಯನ್ನೇ ಜಾರಿಗೆ ತರುತ್ತಿದೆ? ಲೈಬ್ರರಿ ಹಾಗೂ ಅಕೌಂಟ್ಸ್ ಇಲಾಖೆಯಲ್ಲಿ ಇದನ್ನು ಪರಿಣಾಮಕಾರಿಯಾಗಿ ಉಪಯೋಗಿಸಬೇಕೆಂದು ವಿಚಾರ ಮಾಡಲಾಗಿದ್ದು, ಅದನ್ನು ಉಪಯೋಗ ಮಾಡಲಾಗುತ್ತಿದೆಯೇ? ಅಕ್ರಮವಾಗಿ ಅದನ್ನು ಬಳಸಿದ ಅಧಿಕಾರಿಗಳ ಮೇಲೆ ತಾವೇನು ಕ್ರಮ ಕೈಗೊಳ್ಳುತ್ತಿದ್ದೀರಿ? ಸ್ಮಾರ್ಟ್ ಕಾರ್ಡ್ ಪದ್ಧತಿ ಜಾರಿಗೆ ಬಂದ ಮೇಲೆ ರಾಜ್ಯದಲ್ಲಿ, ಬಹಳ ಪ್ರಾಮಾಣಿಕವಾಗಿ ಅದನ್ನು ಉಪಯೋಗಿಸುತ್ತಿರುವವರು ಕೇವಲ ಮುಖ್ಯ ಮಂತ್ರಿಗಳು ಎಂಬುದು ಎಲ್ಲ ಕಡೆ ಕೇಳಿ ಬರುತ್ತಿದೆ. ಅದನ್ನು ಬೇರೆಯವರೂ ಉಪಯೋಗಿಸಲು ಸರ್ಕಾರವೇನು ಕ್ರಮ ಕೈಗೊಂಡಿದೆ?

ಶ್ರೀ ಎಸ್.ಎಂ. ಕೃಷ್ಣ: ಆಡಳಿತದಲ್ಲಿ ಸುಧಾರಣೆ ತರಬೇಕೆಂಬ ದೊಡ್ಡ ಬಯಕೆಯಿಂದ ಸ್ಮಾರ್ಟ್‌ಕಾರ್ಡ್ ಸಿಸ್ಟಂ ಅನ್ನು ಜಾರಿ ತರಲಾಗಿದೆ. ಇದು ನಮ್ಮ ರಾಜ್ಯಕ್ಕೆ ಹೊಸ ಅನುಭವ. ಆ ಹೊಸ ಅನುಭವದ ಆಧಾರದ ಮೇಲೆ 4,635 ಸ್ಮಾರ್ಟ್‌ಕಾರ್ಡ್‌ಗಳ ಪೈಕಿ 4,265 ಸ್ಮಾರ್ಟ್‌ಕಾರ್ಡ್‌ಗಳು ಈಗ ಜಾರಿಯಲ್ಲಿವೆ. ಆದರಲ್ಲಿ ಕೆಲವು ಹುದ್ದೆಗಳು ಖಾಲಿ ಇರುವುದರಿಂದ, 126 ಸ್ಮಾರ್ಟ್‌ಕಾರ್ಡ್‌ಗಳನ್ನು ಕೊಡಲು ಸಾಧ್ಯವಾಗಲಿಲ್ಲ. ವಿಧಾನಸೌಧ ಎಂಎಸ್ ಬಿಲ್ಡಿಂಗ್ ಕಾಂಪ್ಲೆಕ್ಸ್ ಎರಡರಲ್ಲೂ ಕೂಡ ಇದನ್ನು ಪ್ರಯೋಗಾರ್ಥವಾಗಿ ಜಾರಿಗೆ ತರಲಾಗಿದೆ. ಇದರ ಕನ್ಸೆಂಟ್ ಮಾನಿಟರಿಂಗ್ ಅನ್ನು ಸಹ ಡಿಪಿಎಆರ್‌ರವರು ಮಾಡುತ್ತಿದ್ದಾರೆ; ಆಗಿಂದಾಗ್ಗೆ ಸರ್‌ಪ್ರೈಸ್ ಚೆಕ್ಸ್ ಅನ್ನು ಸಹ ಪೊಲೀಸಿನವರು ಸಿವಿಲ್ ವಸ್ತ್ರದಲ್ಲಿದ್ದು, ಪತ್ತೆ ಮಾಡುತ್ತಾರೆ. ಒಟ್ಟಿನಲ್ಲಿ ಇದರ ಹಿಂದಿರುವ ಸದ್ಭಾವನೆಯನ್ನು ಮಾನ್ಯ ಸದಸ್ಯರು ಗಮನಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ, ಏನಾದರೂ ಹೆಚ್ಚು ಕಡಿಮೆಯಾಗಿದ್ದರೂ ಪೀರಿಯಾಡಿಕಲ್ ರಿವ್ಯೂ ಮಾಡಿದಾಗ ಪ್ರಿಂಟ್‌ಔಟ್ ಸಿಗುತ್ತದೆ, ಆದ್ದರಿಂದ ಮಾನಿಟರಿಂಗ್ ಮಾಡುವುದರಿಂದ ಹೆಚ್ಚಿನ ಮಟ್ಟದಲ್ಲಿ ಇದರ ಪ್ರಭಾವ ಬೀಳಬಹುದೆನ್ನುವ ದೃಷ್ಟಿಯಿಂದ ಇದಕ್ಕಾಗಿ ಎಲ್ಲರ ಸಹಕಾರವನ್ನು ನಾನು ಕೋರುತ್ತೇನೆ.

ಶ್ರೀ ಎ. ರಾಮದಾಸ್: ತಾವು ಮಾಡಿರುವ ಕ್ರಮವನ್ನು ನಾನು ಸ್ವಾಗತಿಸುತ್ತೇನೆ, ಈ ಕಾರ್ಯಕ್ರಮ ಬಹಳವಾಗಿ ಯಶಸ್ವಿಯಾಗಬೇಕಾಗಿತ್ತು. ನಾನೀಗಾಗಲೇ ಹೇಳಿದಂತೆ ಫೆಬ್ರವರಿ 5 ಹಾಗೂ ನಿನ್ನೆ ಕೂಡ ಒಂದು ಸುತ್ತೋಲೆ ಹೊರಡಿಸಿದ್ದರೂ ಆ ಪದ್ಧತಿ ಸಂಪೂರ್ಣವಾಗಿ ಬರುಮಂಥ ವ್ಯವಸ್ಥೆಯಾಗುತ್ತಿಲ್ಲ, ಸನ್ಮಾನ್ಯ ಮುಖ್ಯಮಂತ್ರಿಗಳು ಇದನ್ನು ತಾವು ಕಂಪಲ್‌ಸರಿಯಾಗಿ ಮಾಡುತ್ತಿರುವುದರಿಂದ ನಾನು ನಿಮಗೆ ಕಾಂಪ್ಲಿಮೆಂಟ್ ಮಾಡಿದೆ. ಆದರೆ, ಬೇರೆ ಬೇರೆ ಅಧಿಕಾರಿಗಳು ಸರಿಯಾಗಿ ಮಾಡುತ್ತಿಲ್ಲ, ತಾವೇ ಹೇಳಿದ ಹಾಗೆ ಗ್ರಂಥಾಲಯ ಹಾಗೂ ಅಕೌಂಟ್ಸ್ ಡಿಪಾರ್ಟ್‌ಮೆಂಟ್‌ಗಳಲ್ಲಿ ಈ ಪದ್ಧತಿ ಅತಿ ಜರೂರು ಆಗಬೇಕೆಂದೂ ಹೇಳಿದ್ದರೂ ಈ ಎರಡೂ ಇಲಾಖೆಗಳಲ್ಲಿ ಇದಕ್ಕೆ ಬೇಕಾದ ವ್ಯವಸ್ಥೆಗಳನ್ನು ಮಾಡಿಕೊಂಡಿರುವುದಿಲ್ಲ, ಈ ಪದ್ಧತಿ ಜಾರಿಗೆ ಬಂದು ವರ್ಷವಾದರೂ ಕೂಡ ಈ ಕಾರ್ಯಕ್ರಮ ಸಂಪೂರ್ಣವಾಗಿ ಯಶಸ್ವಿಯಾಗುತ್ತಿಲ್ಲ. ತಾವೇ ತಮ್ಮ ಉತ್ತರದಲ್ಲಿ 622 ಪ್ರಕರಣಗಳನ್ನು ಪತ್ತೆ ಹಚ್ಚಿದ್ದು, ಪ್ರಧಾನ

ಕಾರ್ಯದರ್ಶಿಗಳವರಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದ್ದೀರಿ, ಅವರು ಕೂಡಲೇ ತಕ್ಷಣ ಕ್ರಮಗಳನ್ನು ಕೈಗೊಂಡರೆ ಅಕ್ರಮಗಳನ್ನು ತಪ್ಪಿಸುವುದರ ಜೊತೆಗೆ ಈ ಪದ್ಧತಿ ಇಡೀ ರಾಜ್ಯದಲ್ಲಿ ಯಶಸ್ವಿಯಾಗುತ್ತದೆ. ವಿಧಾನ ಸೌಧದಲ್ಲಿ ಯಶಸ್ವಿಯಾಗಿಲ್ಲವೆಂದರೆ ಬೇರೆ ಕಡೆ ಬಹಳ ಕಷ್ಟವಾಗುತ್ತದೆ, ತಮ್ಮ ರೀತಿಯಲ್ಲಿಯೇ ಬೇರೆಯವರೂ ಕೂಡ ಏಕೆ ಅದನ್ನು ಉಪಯೋಗಿಸುತ್ತಿಲ್ಲವೆಂದು ಮತ್ತೊಮ್ಮೆ ತಮ್ಮನ್ನು ಕೇಳುವುದರ ಜೊತೆಗೆ ಇದಕ್ಕೇನು ತಾವು ಕ್ರಮ ಕೈಗೊಳ್ಳುತ್ತಿದ್ದೀರಿ.

ಶ್ರೀ ಎಸ್.ಎಂ. ಕೃಷ್ಣ: ಮೊನ್ನೆ ತಾನೇ ಎಲ್ಲಾ ಕಾರ್ಯದರ್ಶಿಗಳಿಗೆ ಈ ಬಗ್ಗೆ ಪತ್ರ ಬರೆದಿದ್ದು, ಈ ಮ್ಯಾನುಯಲ್ ಅಟೆಂಡ್‌ಡೆನ್ಸ್ ಬದಿಗಿರಿಸಿದವಾಗ ಈ ಸ್ಮಾರ್ಟ್‌ಕಾರ್ಡ್‌ಗಳನ್ನು ಅವಶ್ಯವಾಗಿ ಉಪಯೋಗಿಸತಕ್ಕಂಥದ್ದು ಜಾರಿಗೆ ಬರುತ್ತದೆ, ಸ್ಮಾರ್ಟ್‌ಕಾರ್ಡ್‌ನ್ನು ಹೆಚ್ಚು ಬಳಸಲಿಕ್ಕೆ ಇದೊಂದು ಪೂರಕವಾಗುತ್ತದೆ, ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಸ್ವಾಗತಿಸಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಅಧ್ಯಕ್ಷರು: ಮಾನ್ಯ ಗುರುಸ್ವಾಮಿಯವರನ್ನು ಬೇರೆ ಡಿಪಾರ್ಟ್‌ಮೆಂಟ್‌ಗೆ ವರ್ಗಾಯಿಸಿರುವುದರಿಂದ, ನಿಮಗೆ ಈ 31ರೊಳಗೆ ಉತ್ತರ ತರಿಸಿಕೊಟ್ಟು ಅವಕಾಶ ಮಾಡಿಕೊಡುತ್ತೇನೆ ಈಗ ಮಾನ್ಯ ಜೆ.ಟಿ. ಪಾಟೀಲ್ ತಾವು ತಮ್ಮ ಪ್ರಶ್ನೆ ಕೇಳಿ.

ಗಲಗಲಿ ಮತ್ತು ತೊದಲಬಾಗಿಗೆ ವಿದ್ಯುತ್ ಪೂರೈಕೆ:

15 (182) ಶ್ರೀ ಪಾಟೀಲ್ ಜೆ.ಟಿ. (ಬೀಳಗಿ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಗಲಗಲಿ ಹಾಗೂ ತೊದಲಬಾಗಿ 33 ಕೆ.ವಿ. ವಿದ್ಯುತ್ ಸ್ಟೇಷನ್‌ಗಳಲ್ಲಿ ರಾಜ್ಯದಲ್ಲಿಯೇ ಅತೀ ಕನಿಷ್ಟ ವಿದ್ಯುತ್ ಸರಬರಾಜು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪ್ರತಿ ದಿನ ಕೇವಲ 4 ಗಂಟೆಗೂ ಕಡಿಮೆ) ಹಾಗಿದ್ದಲ್ಲಿ ಅಲ್ಲಿನ ವಿದ್ಯುತ್ ಸುಧಾರಣೆಗೆ ಕೈಗೊಂಡ ಕ್ರಮಗಳೇನು;

2) ಬೀಳಗಿ ಮತ ಕ್ಷೇತ್ರದ ತೆಗ್ಗಿ, ಕಲಬೀಳಗಿ ಹಾಗೂ ಬಿಸನಗಮಾಡಿ 33 ಕೆ.ವಿ. ವಿದ್ಯುತ್ ಸ್ಟೇಷನ್‌ಗಳು ಮಂಜೂರಿಯಾಗಿದ್ದು ಇವುಗಳ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಯಾವಾಗ ಕಾರ್ಯಾರಂಭವಾಗುವುದು?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು)

1) ಗಲಗಲಿಯಲ್ಲಿರುವ 33 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ನಿಗೆ ಮುಧೋಳದಲ್ಲಿರುವ 110 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ನಿಂದ ವಿದ್ಯುತ್ ಸರಬರಾಜಾಗುತ್ತಿದ್ದು, ಈ 110 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ ಓವರ್ ಲೋಡ್ ಆಗುತ್ತಿರುವುದರಿಂದ, ಲೋಡನ್ನು ನಿಯಂತ್ರಿಸುವ ಸಲುವಾಗಿ ಗಲಗಲಿಯಲ್ಲಿರುವ 33 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ನಿನಲ್ಲಿ ವಿದ್ಯುತ್ ಸರಬರಾಜಿನ ಬಗ್ಗೆ ನಿರ್ಬಂಧಗಳನ್ನು ವಿಧಿಸುವುದು ಪ್ರಸ್ತುತ ಅನಿವಾರ್ಯವಾಗಿದೆ. ಇದೇ ರೀತಿ ತೊದಲಬಾಗಿಯಲ್ಲಿರುವ 33 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ ಸಹ ಓವರ್ ಲೋಡ್